(ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಗಡಿಭಾಗದಲ್ಲಿದ್ದು, ಇಲ್ಲಿ ಜಾನುವಾರು ರೋಗಗಳ ನಿಯಂತ್ರಣಕ್ಕಾಗಿ ಚೆಕ್‌ಪೋಸ್ಟ್‌-ನಿಗಾ ಘಟಕ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಆ) ಹಾಗಿದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು (ವಿವರ ನೀಡುವುದು) ;

ಶ್ರೀ ಟಿ.ಬಿ. ಜಯಸಂದ್ರ :– (ಮಾನ್ಯ ಕಾನೂನು, ನ್ಯಾಯ, ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು)

(ಅ) ಇದೆ

(ಆ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹಣಕಾಸು ಇಲಾಖೆಗೆ ಬಂದ ಅನುದಾನ

94(216) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :–ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ದಿನಾಂಕ:01–05–2013 ರಿಂದ 01–06–2014 ರವರೆಗೆ ಹಣಕಾಸು ಇಲಾಖೆಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ನೀಡಿರುವ ಹಣದ ಮೊತ್ತವೆಷ್ಟು; ಇದೇ ಅವಧಿಯಲ್ಲಿ ರಾಜಸ್ವ ಸಂಗ್ರಹದಿಂದ ಬಂದಿರುವ ಹಣವೆಷ್ಟು ;

(ಆ) ಇದೇ ಅವಧಿಯಲ್ಲಿ ವಿವಿಧ ಇಲಾಖೆಗಳಿಗೆ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ವೆಚ್ಚ ಮಾಡಿರುವ ಹಣವೆಷ್ಟು ; (ಪ್ರತಿ ಇಲಾಖೆಯ ಬಗ್ಗೆ ಪ್ರತ್ಯೇಕ ವಿವರ ಒದಗಿಸುವುದು) ;

(ಇ) ಇಲ್ಲಿಯವರೆವಿಗೆ ಖರ್ಚಾಗದೇ ಉಳಿದಿರುವ ಹಣವೆಷ್ಟು; ಇದೇ ಅವಧಿಯಲ್ಲಿ ರಾಜ್ಯ ಸರ್ಕಾರ ಯಾವ ಯಾವ ಸಂಸ್ಥೆಗಳಿಂದ ಎಷ್ಟೆಷ್ಟು ಮೊತ್ತದ ಸಾಲವನ್ನು ತಂದಿದೆ ? (ಕೇಂದ್ರ, ರಾಜ್ಯದ ವಿವಿಧ ಸಂಸ್ಥೆಗಳಿಂದ ಪಡೆದುಕೊಂಡಿರುವ ಸಾಲದ ಪೂರ್ಣ ವಿವರ ಒದಗಿಸುವುದು)

ಶ್ರೀ ಸಿದ್ದರಾಮಯ್ಯ :- (ಮಾನ್ಯ ಮುಖ್ಯಮಂತ್ರಿಗಳು)

(ಅ) 2013–14ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ವಿವಿಧ ಮೂಲಗಳಿಂದ ಹಾಗೂ ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ವಿವರ ಈ ಕೆಳಕಂಡಂತಿದೆ ;

(ಕೋಟಿ ರೂ.ಗಳಲ್ಲಿ)

ಕ್ರ.ಸಂ		2013–14 ಪೂರ್ವ ವಾಸ್ತವಿಕ ಸಂಗ್ರಹಣೆ 1.4.2013 ರಿಂದ 31.3.2014 ರವರೆಗೆ	ಏಪ್ರಿಲ್ 2014*	ಮೇ 2014**
1	2	3		
(ಅ)	ಸ್ವಂತ ತೆರಿಗೆ ರಾಜಸ್ವ	60664	5236	5477
(ಆ)	ಸ್ವಂತ ತೆರಿಗೆಯೇತರ ರಾಜಸ್ವ	3970	327	238
(ಇ)	ಕೇಂದ್ರ ತೆರಿಗೆಯಲ್ಲಿ ರಾಜ್ಯದ ಪಾಲು	13808	1202	1202
(ಈ)	ಕೇಂದ್ರ ಸರ್ಕಾರದ ಸಹಾಯನುದಾನ	8804	707	653
	ಒಟ್ಟು ರಾಜಸ್ವ ಜಮೆಗಳು	**87426**	**7472**	**7570**

(ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಇ) 2013–14ನೇ ಸಾಲಿನ ಖರ್ಚಾಗದೇ ಉಳಿದಿರುವ ಹಣದ ಬಗ್ಗೆ ಮಹಾಲೇಖಪಾಲರು Appropriation Account ಅಂತಿಮಗೊಳಿಸಿದ ನಂತರವಷ್ಟೇ ಈ ಮಾಹಿತಿ ಲಭ್ಯವಾಗುತ್ತದೆ. 2013–14ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಪಡೆದಿರುವ ಸಾಲದ ವಿವರ ಈ ಕೆಳಕಂಡಂತಿದೆ ;

(ಕೋಟಿ ರೂ.ಗಳಲ್ಲಿ)

ವಿವರ	2013–14 ಪೂರ್ವ ವಾಸ್ತವಿಕ 1.4.2013 ರಿಂದ 31.3.2014 ರವರೆಗೆ	ಏಪ್ರಿಲ್ 2014	ಮೇ 2014
ಮಾರುಕಟ್ಟೆ ಸಾಲ	14997		1500
ನಬಾರ್ಡ್	486	62	—
ಸಣ್ಣ ಉಳಿತಾಯ	649	—	—
ಕೇಂದ್ರ ಸರ್ಕಾರದ ಸಾಲ ಮತ್ತು ಮುಂಗಡಗಳು	760	141	64
ಒಟ್ಟು	**16892**	**203**	**1564**

* ಮಹಾಲೇಖಪಾಲರು ** ಖಜಾನೆ

ಅನುಬಂಧ

2013–14 ನೇ ಸಾಲಿನ ಆಯವ್ಯಯ ಅಂದಾಜು ಮತ್ತು ಪೂರ್ವ ವಾಸ್ತವಿಕ ವೆಚ್ಚ

ರೂ ಲಕ್ಷಗಳಲ್ಲಿ

DN		BE	PEXP
01	ಕೃಷಿ ಮತ್ತು ತೋಟಗಾರಿಕೆ	4,37,805.41	3,54,231.01
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	1,90,336.91	1,81,507.58
03	ಆರ್ಥಿಕ	10,48,680.80	9,70,738.49
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	93,397.49	79,946.48
05	ಒಳಾಡಳಿತ ಮತ್ತು ಸಾರಿಗೆ	4,67,996.79	4,30,328.62
06	ಮೂಲಭೂತ ಸೌಕರ್ಯ ಅಭಿವೃದ್ಧಿ	5,685.08	50,093.84
07	ಗ್ರಾಮೀಣ ಅಭಿವೃದ್ಧಿ ಮತ್ತು-ಪಂಚಾಯತಿ ರಾಜ್	8,21,760.25	5,60,138.78
08	ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ	1,16,127.27	1,55,998.31
09	ಸಹಕಾರ	2,12,603.69	3,37,617.56
10	ಸಮಾಜ ಕಲ್ಯಾಣ	5,04,558.37	4,64,538.29
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	3,46,616.70	2,99,382.99
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	57,315.84	50,675.60
13	ಆಹಾರ ಮತ್ತು ನಾಗರೀಕ ಸರಬರಾಜು	3,50,737.21	3,15,259.05
14	ಕಂದಾಯ	3,79,707.83	3,45,021.83
15	ಮಾಹಿತಿ ತಂತಜ್ಞಾನ	19,462.75	14,468.44
16	ವಸತಿ	1,36,526.19	1,38,017.72
17	ಶಿಕ್ಷಣ	18,92,273.19	16,84,688.09
18	ವಾಣಿಜ್ಯ ಮತ್ತು ಕೈಗಾರಿಕೆ	88,495.56	79,493.36
19	ನಗರಾಭಿವೃದ್ಧಿ	7,93,664.63	6,49,945.35
20	ಲೋಕೋಪಯೋಗಿ	5,73,200.17	6,82,005.14
21	ಜಲ ಸಂಪನ್ಮೂಲ	8,11,270.82	7,05,397.80
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	5,42,137.82	4,39,364.95
23	ಕಾರ್ಮಿಕ	55,781.43	43,834.71
24	ಇಂಧನ	6,24,076.27	5,89,327.18
25	ಕನ್ನಡ ಮತ್ತು ಸಂಸ್ಕೃತಿ	26,266.37	23,030.59
26	ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತಜ್ಞಾನ	56,229.38	79,193.73
27	ಕಾನೂನು	59,430.21	50,598.94
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	14,900.49	13,469.97
29	ಋಣ ಮೇಲುಸ್ತುವಾರಿ	14,34,042.00	10,27,524.63
	TOTAL:	121,61,086.92	108,15,839.06

ಮೂಲ: 2013–14ನೇ ಸಾಲಿನ ಆಯವ್ಯಯ ಸಂಪುಟಗಳಿಂದ ಕ್ರೋಢೀಕರಿಸಲಾಗಿದೆ ಮತ್ತು 2013–14ನೇ ಸಾಲಿನ ಲೆಕ್ಕವು ಪೂರ್ವವಾಸ್ತವಿಕವಾಗಿದ್ದು, ಮಹಾಲೇಖಪಾಲರು ಲೆಕ್ಕವನ್ನು ಅಂತಿಮಗೊಳಿಸಿದ ನಂತರ ಬದಲಾವಣೆ ಆಗುವ ಸಾಧ್ಯತೆಗಳಿವೆ.